ನಿಮ್ಮಲ್ಲೊಬ್ಬರು ತನ್ನ ಸಹೋದರನನ್ನು ಭೇಟಿಯಾದರೆ ಅವನಿಗೆ ಸಲಾಂ ಹೇಳಲಿ. ನಂತರ ಅವರಿಬ್ಬರ ನಡುವೆ ಒಂದು ಮರ, ಅಥವಾ ಗೋಡೆ, ಅಥವಾ ಕಲ್ಲು ಅಡ್ಡವಾಗಿ ಬಂದು, ನಂತರ ಪುನಃ ಅವರು ಭೇಟಿಯಾದರೆ ಅವನಿಗೆ ಮತ್ತೊಮ್ಮೆ ಸಲಾಂ ಹೇಳಲಿ

ಅಬೂ ಹುರೈರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅಲ್ಲಾಹನ ಸಂದೇಶವಾಹಕರು
(ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನಿಮ್ಮಲ್ಲೊಬ್ಬರು ತನ್ನ ಸಹೋದರನನ್ನು ಭೇಟಿಯಾದರೆ ಅವನಿಗೆ ಸಲಾಂ ಹೇಳಲಿ. ನಂತರ ಅವರಿಬ್ಬರ ನಡುವೆ ಒಂದು ಮರ, ಅಥವಾ ಗೋಡೆ, ಅಥವಾ ಕಲ್ಲು ಅಡ್ಡವಾಗಿ ಬಂದು, ನಂತರ ಪುನಃ ಅವರು ಭೇಟಿಯಾದರೆ ಅವನಿಗೆ ಮತ್ತೊಮ್ಮೆ
ಸಲಾಂ ಹೇಳಲಿ."
[صحيح] [رواه أبو داود]

ಒಬ್ಬ ಮುಸಲ್ಮಾನನು ತನ್ನ ಸಹೋದರನನ್ನು ಭೇಟಿಯಾದಾಗಲೆಲ್ಲಾ ಸಲಾಂ ಹೇಳಲು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ಪ್ರೋತ್ಸಾಹಿಸುತ್ತಿದ್ದಾರೆ. ಎಲ್ಲಿಯವರೆಗೆಂದರೆ, ಅವರಿಬ್ಬರು ಜೊತೆಯಾಗಿ ನಡೆಯುತ್ತಿದ್ದು, ಅವರಿಬ್ಬರ ನಡುವೆ ಒಂದು ಮರ, ಅಥವಾ ಗೋಡೆ, ಅಥವಾ ಕಲ್ಲು ಅಡ್ಡವಾಗಿ ಬಂದು, ನಂತರ ಪುನಃ ಅವರು ಭೇಟಿಯಾದರೆ ಅವನಿಗೆ ಮತ್ತೊಮ್ಮೆ ಸಲಾಂ ಹೇಳಬೇಕಾಗಿದೆ.

http://www.sunnah.global/hadeeth/kn/show/3552